# 8 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

**ಸಿ.ಸಿ.ನಂ.31825/2018**

ಪಿರ್ಯಾದುದಾರರು ವಿರುದ್ಧ ಆರೋಪಿತರು

ವೈಯಾಲಿಕಾವಲ್ ಪೋಲೀಸ್ ಠಾಣೆ ಅರುಣ್

**ಃ ದೋಷಾರೋಪಣೆ ಃ**

ನಾನು ನಾಗೇಶ ಸಿ, 8 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು, ಆರೋಪಿಯಾದ

ಅರುಣ್ ಬಿನ್ ಮೂರ್ತಿ
38 ವರ್ಷ, ನಂ.48
ಉಕ್ಕಡಪಾಳ್ಯ, ವಿವೇಕನಗರ
ಬೆಂಗಳೂರು

ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ-

ದಿನಾಂಕ 26-10-2017 ರಂದು ಆರೋಪಿತರಾದ ನೀವು ವೈಯಾಲಿಕಾವಲ್‌ನ ಪ್ಯಾಲೇಸ್ ಗುಟ್ಟಹಳ್ಳಿಯ ಮುನೇಶ್ವರ ಬ್ಲಾಕ್, 3 ನೇ ಕ್ರಾಸ್ ನಂ.01/01 ರ ಸ್ವತ್ತನ್ನು ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಕಾರಣ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 448 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತಹ ಶಿಕ್ಷಾರ್ಹವಾದ ಅಪರಾಧ ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸದರಿ ಸ್ವತಿನ ಕಿಟಕಿಯ ಗ್ಲಾಸುಗಳನ್ನು ಹೊಡೆದು ಹಾಕಿ ಸಾಕ್ಷಿ-1 ರವರಿಗೆ ನಷ್ಟ ಉಂಟು ಮಾಡಿರುತ್ತೀರಿ. ಕಾರಣ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 427 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ

ಒಳಪಡುವಂತಹ ಶಿಕ್ಷಾರ್ಹವಾದ ಅಪರಾಧ ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಸೂಳೆಮುಂಡೆ, ಬೋಳಿಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಕಾರಣ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತಹ ಶಿಕ್ಷಾರ್ಹವಾದ ಅಪರಾಧ ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿರುತ್ತೀರಿ. ಕಾರಣ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 504 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಗೆ ಒಳಪಡುವಂತಹ ಶಿಕ್ಷಾರ್ಹವಾದ ಅಪರಾಧ ಮಾಡಿದ್ದೀರಿ ಎಂದು ಆಪಾದಿಸಲಾಗಿದೆ.

ಮೇಲಿನ ದೋಷಾರೋಪಕ್ಕೆ ನಿಮ್ಮನ್ನು ಗುರಿಪಡಿಸಿ, ಈ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ನಡೆಯಬೇಕೆಂದು ನಿರ್ದೇಶಿಸಲಾಗಿದೆ.

ದಿಃ

**8 ನೇ ಅಪರ ಮುಖ್ಯ ಮಹಾನಗರ**
**ದಂಡಾಧಿಕಾರಿಗಳು, ಬೆಂಗಳೂರು**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ 3ನೇ ನ್ಯಾಯಾಲಯ, ದಾವಣಗೆರೆ.

ಸಿ.ಸಿ.ನಂ 179/2017

ಫಿರ್ಯಾದುದಾರರು : ಃ ವಿರುದ್ಧ ಃ ಆರೋಪಿತರುಃ

ಗಾಂಧಿನಗರ ಪೊಲೀಸ್ ಠಾಣೆ, ದಾವಣಗೆರೆ.

ಹನುಮಂತ ಬಿನ್ ಬಸವರಾಜಪ್ಪ, ಮತ್ತು ಇತರರು.

ಃಃಃ ಆರೋಪಿತರ ಹೇಳಿಕೆ ಃಃಃ

ಪ್ರಶ್ನೆಃ1 ಃ ಈಗ ಓದಿ ಹೇಳಿದ ನಿಮ್ಮ ಮೇಲಿನ ದೋಷರೋಪ ನಿಮಗೆ ತಿಳಿಯಿತೆ?

ಉತ್ತರ ಃ

ಎ-1 ಎ-2

ಪ್ರಶ್ನೆಃ2 ಃ ಸದರಿ ದೋಷರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ ಃ

ಎ-1 ಎ-2

ಮೇಲೆ ನಮೂದು ಮಾಡಿದ ಆರೋಪಿತರ ಹೇಳಿಕೆಯನ್ನು ನನ್ನ ಉಪಸ್ಥಿತಿಯಲ್ಲಿ ತೆಗೆದುಕೊಂಡಿದ್ದು, ಸದರಿ ಹೇಳಿಕೆ ಆರೋಪಿತರು ನೀಡಿದ ನಿಜವಾದ ಹೇಳಿಕೆ ಇರುತ್ತದೆ.

ದಿಃ23-06-2017

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
3ನೇ ನ್ಯಾಯಾಲಯ, ದಾವಣಗೆರೆ.